


## ಟ್ಯಾಕ್ಸಿ

ಟ್ಯಾಕ್ಸಿಗಳ ಸೇವೆ ಒದಗಿಸುವ ಎಲ್ಲಾ ಆ್ಯಪ್‌ಗಳನ್ನು ಇದು ಒಂದೇ ಛಾವಣಿಯಡಿ ತಂದಿದೆ. ಉಬರ್, ಓಲಾ ಮೊದಲಾದ ಟ್ಯಾಕ್ಸಿ ಸೇವೆ ನೀಡುವ ಕಂಪೆನಿಗಳ ಮಾಹಿತಿಯನ್ನು ಇದು ಒದಗಿಸುತ್ತದೆ. ಈ ಆ್ಯಪ್ ಮೂಲಕ ಕಡಿಮೆ ದರ ಹಾಗೂ ದುಬಾರಿ ಶುಲ್ಕ ವಿಧಿಸುವ ಟ್ಯಾಕ್ಸಿಗಳೆಂದು ಎರಡು ಪಟ್ಟಿಯನ್ನಾಗಿ ವಿಭಾಗಿಸಬಹುದು. ಟ್ಯಾಕ್ಸಿ ಸೇವೆ ಒದಗಿಸುವ ಕಂಪೆನಿ ಹೆಸರನ್ನು ನಮೂದಿಸಿ ನಿಗದಿತ ದರ ಪಟ್ಟಿ ನೀಡುವಂತೆ ಕೇಳಬಹುದು. ಸದ್ಯ ಈ ಆ್ಯಪ್ ಭಾರತದ 52 ನಗರಗಳಲ್ಲಿ ಕ್ರಿಯಾಶೀಲವಾಗಿದೆ. ಟ್ಯಾಕ್ಸಿ ಜೊತೆ ವೂಡೂ ಆ್ಯಪ್ ಬಳಸಿ ಟ್ಯಾಕ್ಸಿ ಸೇವೆಯ ಆ್ಯಪ್ ಶುರು ಮಾಡಬಹುದು. ಇದು ಆ್ಯಂಡ್ರಾಯ್ಡ್ ಸಾಧನದಲ್ಲಿ ಮಾತ್ರ ಲಭ್ಯ.

## ಡಿಜಿಲಾಕರ್

ಯಾವುದೇ ಭಾರತೀಯ ನಾಗರಿಕ ತನ್ನ ವೈಯಕ್ತಿಕ ವಿವರಗಳನ್ನು ಡಿಜಿಟಲ್ ಆಗಿ ಕಾಪಿಡುವ ಆ್ಯಂಡ್ರಾಯ್ಡ್ ಆ್ಯಪ್. ಆಧಾರ್ ಕಾರ್ಡ್ ಹೊಂದಿರುವವರು ಈ ಲಾಕರ್ ಬಳಸಬಹುದು. ಪಾನ್ ಕಾರ್ಡ್, ಚಾಲನಾ ಪರವಾನಗಿ, ಆಧಾರ್ ನಂಬರ್, ಪಡಿತರ ಚೀಟಿ ಮೊದಲಾದ ದಾಖಲೆಗಳ ಡಿಜಿಟಲ್ ಪ್ರತಿಗಳನ್ನು ಇಲ್ಲಿ ಭದ್ರವಾಗಿ ಇಡಬಹುದು. ಈ ಲಾಕರ್ ಇ-ದಾಖಲೆಗಳ ಯುಆರ್‌ಐ ಸಂಪರ್ಕಗಳನ್ನು ಕಾದಿಡುತ್ತದೆ. ಈ ದಾಖಲೆಗಳ ಮೇಲೆ ಡಿಜಿಟಲ್ ಸಹಿ ಹಾಕುವ ಕುರಿತೂ ಈ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗುವುದು. ಇದು ಕೂಡಾ ಆ್ಯಂಡ್ರಾಯ್ಡ್ ಆ್ಯಪ್.




## ಇ- ಹಾಸ್ಪಿಟಲ್ಸ್

ಇದು ದೇಶದಲ್ಲಿರುವ ಎಲ್ಲಾ ಸರ್ಕಾರಿ ಆಸ್ಪತ್ರೆಗಳನ್ನು ಪರಸ್ಪರ ಸಂಪರ್ಕಿಸುವ ವ್ಯವಸ್ಥೆ. ಇದು ಸಮಗ್ರ ಆಸ್ಪತ್ರೆ ನಿರ್ವಹಣಾ ಮಾಹಿತಿ ವ್ಯವಸ್ಥೆಯಾಗಿದೆ. ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ, ನಿಮ್ಹಾನ್ಸ್ ಮೊದಲಾದವುಗಳು ಒಂದೇ ವೇದಿಕೆಯಡಿ ಬರುತ್ತವೆ. ನಾಗರಿಕರು ಇದರ ಮೂಲಕ ಅಪಾಯಿಂಟ್‌ಮೆಂಟ್ ತೆಗೆದುಕೊಳ್ಳಬಹುದು. ಶುಲ್ಕ ಪಾವತಿಸಬಹುದು. ತಮ್ಮ ವೈದ್ಯಕೀಯ ವರದಿಗಳನ್ನೂ ನೋಡಬಹುದು.

## ಟ್ರೂಮೆಸೆಂಜರ್

ಮೇಲ್‌ಬಾಕ್ಸ್‌ನಲ್ಲಿರುವ ಜಂಕ್ ಮೇಲ್ ಫೋಲ್ಡರ್ ರೀತಿಯಲ್ಲಿ ಕಾರ್ಯ ನಿರ್ವಹಿಸುವ ಈ ಆ್ಯಪ್ ಜಂಕ್ ಎಸ್‌ಎಂಎಸ್‌ಗಳನ್ನು ತಡೆಯುತ್ತದೆ. ನಿಮ್ಮ ಆ್ಯಂಡ್ರಾಯ್ಡ್ ಸಾಧನದಲ್ಲಿ ಈ ಆ್ಯಪ್ ಅನ್ನು ಡಿಫಾಲ್ಟ್ ಆ್ಯಪ್ ಆಗಿ ಇಟ್ಟುಕೊಳ್ಳುವ ಅವಶ್ಯಕತೆಯಿದೆ. ಈ ಆ್ಯಪ್ ಜಂಕ್ ಸಂದೇಶಗಳನ್ನು ಸ್ಪಾಮ್ ಎಂದು ಗುರುತು ಮಾಡುತ್ತದೆ. ಆರಂಭದಲ್ಲಿ ನಿಮಗೆ ಬೇಡವಾದ ಸಂದೇಶಗಳನ್ನು ನೀವೇ ಮಾರ್ಕ್ ಮಾಡಬೇಕಾಗುತ್ತದೆ. ಆದರೆ ಕೆಲವು ಸಮಯದ ಬಳಿಕ ಈ ಆ್ಯಪ್ ಅಂತಹ ಸಂದೇಶಗಳನ್ನು ಗುರುತಿಸಿ ಸ್ಪಾಮ್‌ಗೆ ಕಳಿಸುತ್ತದೆ.




## ಇನ್‌ಶಾರ್ಟ್ಸ್

inshorts
stay informed

ಇದು ಸುದ್ದಿಯನ್ನು ಸಂಕ್ಷಿಪ್ತ ರೂಪದಲ್ಲಿ ನೀಡುವ ಆ್ಯಪ್. ಆ್ಯಪ್‌ನಲ್ಲಿರುವ ಸಂಪಾದಕರು ಪ್ರಮುಖ ಸುದ್ದಿಗಳನ್ನು ಎಡಿಟ್ ಮಾಡಿ 60 ಶಬ್ದಗಳಿಗೆ ಇಳಿಸಿ ನೀಡುತ್ತಾರೆ. ಮೇಲ್ನೈ ಚೆನ್ನಾಗಿದ್ದು ಬೆರಳಿನಿಂದ ಮೇಲಕ್ಕೆ ಜಾರಿಸುತ್ತ ಹೋದರೆ ಸುದ್ದಿ ಕಾಣಿಸುತ್ತದೆ. ಬಲಗಡೆ ಕುಟ್ಟಿದರೆ ಪೂರ್ಣ ಸುದ್ದಿಯನ್ನು ಓದಬಹುದು. ಸುದ್ದಿಯನ್ನು ಸ್ಥಳೀಯ ಭಾಷೆಗೆ ಅನುವಾದ ಕೂಡಾ ನೀವೇ ಮಾಡಬಹುದು.

■ ಎಸ್. ತುಂಬೆ